
ಭವಿಸುವರೋ, ಅವರಲ್ಲಿ ಭಗವಂತನೇ ವ್ಯಕ್ತವಾಗುವುದರಿಂದ, ಸಾಕ್ಷಾತ್ಕಾರ ಹೊಂದಿದ ಮಹಾತ್ಮರನ್ನು ಕಂಡರೆ ದೇವರನ್ನೇ ಕಂಡಂತೆ. ಅಂಥವರ ಜೊತೆಗೆ ಒಡನಾಡಿದ ಅನೇಕಾನೇಕ ವ್ಯಕ್ತಿಗಳು ಅವರ 'ಪತಿತಪಾವನ' ಗುಣದಿಂದಾಗಿ ಪುನೀತರಾದರು; ಭಗವಂತನ ಅವ್ಯಾಜ ಕರುಣೆಗೆ ಸಾಕ್ಷಿಯಾಗಿ ನಿಂತರು. ಶ್ರೀರಾಮನಲ್ಲಿ ಗುಹ, ಶಬರಿ ಮುಂತಾದವರು; ಶ್ರೀಕೃಷ್ಣನಲ್ಲಿ ಅಕ್ರೂರ, ವಿದುರ, ಸುದಾಮ ಮುಂತಾದವರು; ಚೈತನ್ಯನಲ್ಲಿ ಜಗಾಯ್-ಮಧಾಯ್ ಮೊದಲಾದವರು ಹೀಗೆ ಶರಣಾದರು; ಭಗವಂತನ ದಿವ್ಯಸ್ಪರ್ಶವನ್ನು ಹೊಂದಿ ಪಾವನರಾದರು.

### ಗಿರೀಶನ ಶರಣಾಗತಿ

ಶ್ರೀರಾಮಕೃಷ್ಣರ ಬಳಿಗೆ ಬಂದ ಹಲವು ಮಂದಿ ಭಕ್ತರೂ ಇದೇ ರೀತಿ ಅವರ ದಿವ್ಯವ್ಯಕ್ತಿತ್ವದ ಸ್ಪರ್ಶದಿಂದ ಪರಿವರ್ತನೆ ಹೊಂದಿದರು. ಅವತಾರ ಪುರುಷರೆಂದೇ ಭಾವಿಸಲಾಗುವ ಶ್ರೀಮಾತೆ ಹಾಗೂ ಸ್ವಾಮಿ ವಿವೇಕಾನಂದರು ಮಾತ್ರವಲ್ಲದೆ, ಅವರ ಇನ್ನಿತರ ಸಂನ್ಯಾಸೀ ಶಿಷ್ಯರುಗಳು, ನಾಗಮಹಾಶಯ, ಬಲರಾಮ ಬಸು ಇವರಂಥ ಅತ್ಯುನ್ನತ ದರ್ಜೆಯ ಸಾಧಕರು, ಇನ್ನಿತರ ಹಲವು ಮಂದಿ ಗೃಹೀಭಕ್ತರು ಶ್ರೀರಾಮಕೃಷ್ಣರ ಬಳಿಗೆ ಬಂದು ಅವರ ಕೃಪೆಗೆ ಪಾತ್ರರಾದರು. ಅವರಲ್ಲೆಲ್ಲ ವಿಶಿಷ್ಟ ವ್ಯಕ್ತಿತ್ವದ ಹಾಗೂ ಅಸಾಧಾರಣ ರೀತಿಯಲ್ಲಿ ಪತನದ ಪರಾಕಾಷ್ಠೆಯಿಂದ ಪಾರಾಗಿ, ಅತಿಶ್ರೇಷ್ಠ ಭಕ್ತನ ನೆಲೆಗೇರಿದ ಕಥೆ – ಬಂಗಾಳದ ಪ್ರಸಿದ್ಧ ನಾಟಕಕಾರನಾದ ಗಿರೀಶಚಂದ್ರ ಘೋಷ್‌ನದು. ಸನ್ನಿವೇಶದ ಬಲದಿಂದಲೋ, ಸಂಸ್ಕಾರಗಳ ಕಾರಣಗಳಿಂದಲೋ ಗಿರೀಶನು ಅತ್ಯಂತ ಹೀನವಾದ ದುರ್ವ್ಯಸನಗಳಿಗೆ ಬಲಿಯಾಗಿದ್ದ. ಆದರೆ ಶ್ರೀರಾಮಕೃಷ್ಣರ ಮೇಲಿನ ದೃಢವಿಶ್ವಾಸ, ಭಕ್ತಿ, ಶರಣಾಗತಿಯಿಂದ ಅವನು ಎಲ್ಲ ಪಾಪಗಳಿಂದಲೂ ಮುಕ್ತನಾದ. ಅವನ ಶರಣಾಗತಿಯೇ ಒಂದು ದೊಡ್ಡ ದಂತಕತೆಯಾಗಿದೆ. 'ಕಡೇಪಕ್ಷ ದಿನದಲ್ಲಿ ಒಂದು ಕ್ಷಣವಾದರೂ ಭಗವಂತನ ಚಿಂತನೆ ಮಾಡು' ಎಂದು ಶ್ರೀರಾಮಕೃಷ್ಣರು ಅವನಿಗೆ ಉಪದೇಶಿಸಿದರೆ, 'ನನ್ನ ಈಗಿನ ಪರಿಸ್ಥಿತಿಯಲ್ಲಿ ಅದೂ ಅಸಾಧ್ಯ' ಎಂದನಂತೆ ಗಿರೀಶ. ಆಗ ಶ್ರೀರಾಮಕೃಷ್ಣರು, 'ಹಾಗಾದರೆ ನಿನ್ನ ವಕಾಲತ್ತನ್ನು ನನಗೇ ವಹಿಸಿಬಿಡು' ಎಂದರಂತೆ. ಹೀಗೆ 'ವಕಾಲತ್ತನ್ನು (power of attorney) ವಹಿಸುವುದು' ಎಂದರೇನೆಂದು ಪೂರ್ಣವಾಗಿ ಅರ್ಥವಾಗದ ಗಿರೀಶನು 'ಆಗಲಿ' ಎಂದನಂತೆ. ಆ ಕ್ಷಣದಿಂದಲೇ ಅವನ ಬದುಕು ಸಂಪೂರ್ಣ ಬದಲಾಯಿತು. ಪ್ರತಿಯೊಂದು ನಿಮಿಷವೂ ಅವನು ಶ್ರೀರಾಮಕೃಷ್ಣರನ್ನೇ ಚಿಂತಿಸಬೇಕಾಯಿತು. ತಿನ್ನುವುದು, ಕುಡಿಯುವುದು, ಓಡಾಡುವುದು – ಹೀಗೆ ಪ್ರತಿ ಹಂತದಲ್ಲೂ 'ಇದು ತನ್ನಿಚ್ಛೆಯೇ, ಭಗವಂತನ ಇಚ್ಛೆಯೆ? ನನ್ನೆಲ್ಲವನ್ನೂ ನಾನು ಒಪ್ಪಿಸಿಬಿಟ್ಟಾಗಿದೆಯಲ್ಲ?' ಎಂದು ಯೋಚಿಸದೆ ಬೇರೆ ದಾರಿ ಇರಲಿಲ್ಲ. ಹೀಗೆ ಕ್ರಮೇಣ ಅವನ ಮನಸ್ಸೆಲ್ಲ ಭಗವದಭಿಮುಖವಾಯಿತು. ಶರಣಾಗತಿಯ ನಿಜವಾದ ಅರ್ಥ ಇದು. ನಿಜವಾಗಿ ಭಗವಂತನಲ್ಲಿ ಶರಣಾದವನು ತನ್ನೆಲ್ಲವನ್ನೂ ಭಗವಂತನಿಗೆ ಅರ್ಪಿಸುವನು. ತನ್ನ ತನು, ಮನ, ಆತ್ಮಗಳೆಲ್ಲವನ್ನೂ ದೇವರಿಗೆ ಅರ್ಪಿಸಿದವನು ಸ್ವತಂತ್ರ ಇಚ್ಛೆಯನ್ನು ಹೇಗೆ ಹೊಂದಿರಲು ಸಾಧ್ಯ? ಪ್ರತಿಕ್ಷಣವೂ ಎದ್ದು ನಿಲ್ಲುವ 'ನಾನು', 'ನನ್ನದು' – ಈ ಭ್ರಮೆಯನ್ನು ಭಗವಂತನ ನಾಮ, ರೂಪ, ಗುಣಚಿಂತನೆಯಲ್ಲಿ ಲೀನವಾಗಿಸುವುದಲ್ಲದೆ ಮತ್ತೇನು ಮಾಡಲು ಸಾಧ್ಯ? ಇದೇ ನಿಜವಾದ ಶರಣಾಗತಿ, ನಿಜವಾದ ಸಾಧನೆ. ತನ್ನತನ, ಜೀವಬೋಧೆ ಸಂಪೂರ್ಣವಾಗಿ ಅಡಗಿದಾಗ ಕೇವಲ ಭಗವಂತನೊಬ್ಬನೇ ಉಳಿಯುವನು; ಇದನ್ನೇ **'ಪೂರ್ಣಮೇವಾವಶಿಷ್ಯತೇ'** ಎಂದು (ಪೂರ್ಣ ಮಾತ್ರವೇ ಉಳಿಯುವುದು) ಹೇಳಲಾಗಿದೆ. ''ನೀರಿನೊಳಗೆ ಮುಳುಗಿರುವ ಮಡಕೆಯನ್ನು ಒಡೆದಾಗ ಇನ್ನೇನು ಉಳಿಯುವುದು? ಕೇವಲ ನೀರು ಮಾತ್ರವಲ್ಲವೆ?'' ಎನ್ನುತ್ತಾರೆ ಶ್ರೀರಾಮಕೃಷ್ಣರು. ನಿಜ, ಅದೇ ಜೀವಾತ್ಮನ ನಿಜವಾದ ಗುರಿ.

### ಯುವಚೇತನ



ಅಜ್ಞತೆಯೇ ಅಂಧಕಾರ. ಅದು ಎಲ್ಲವನ್ನೂ ಆವರಿಸಿಕೊಂಡಿರುವುದರಿಂದ ಎಲ್ಲ ಅದ್ಭುತವಾಗಿ ಕಾಣುತ್ತದೆ. ಜ್ಞಾನದ ಬೆಳಕಿನಿಂದ ಎಲ್ಲಾ ಸ್ಪಷ್ಟವಾದರೆ, ಆಗ ಯಾವುದರಲ್ಲಿಯೂ ಅದ್ಭುತವಿರುವುದಿಲ್ಲ. ಇಂಥ 'ಅಘಟನಘಟನ ಪಟೀಯಸಿ'ಯಾದ ಮಾಯೆ, ಅದೂ ಲುಪ್ತವಾಗಿಬಿಡುತ್ತದೆ. ಯಾವುದನ್ನು ತಿಳಿದುಕೊಂಡರೆ ಎಲ್ಲವೂ ತಿಳಿಯುತ್ತದೆಯೋ ಅದನ್ನು ತಿಳಿದುಕೊ – ಅದರ ವಿಚಾರವನ್ನು ಯೋಚಿಸು – ಆ ಆತ್ಮವು ಪ್ರತ್ಯಕ್ಷವಾದರೆ ಶಾಸ್ತ್ರಾರ್ಥವು ಕರತಾಮಲಕದ ಹಾಗೆ ಪ್ರತ್ಯಕ್ಷವಾಗುತ್ತದೆ. ಪುರಾತನ ಋಷಿಗಳಿಗೆ ಆಯಿತು, ನಮಗೆ ಆಗುವುದಿಲ್ಲವೆ? ನಾವೂ ಮನುಷ್ಯರೆ. ಒಂದು ಸಲ ಒಬ್ಬರ ಜೀವನದಲ್ಲಿ ಯಾವುದು ಆಗಿದೆಯೋ, ಪ್ರಯತ್ನಪಟ್ಟರೆ, ಅದು ಪುನಃ ಮತ್ತೊಬ್ಬರ ಜೀವನದಲ್ಲಿಯೂ ಅವಶ್ಯವಾಗಿ ಆಗಿಯೇ ಆಗುವುದು. ಯಾವುದು ಒಂದು ಸಲ ಆಗಿದೆಯೋ ಅದೇ ಪುನಃ ಪುನಃ ಆಗುತ್ತದೆ. ಆ ಆತ್ಮವು ಸರ್ವಪ್ರಾಣಿಗಳಿಗೂ ಸಮಾನವಾದದ್ದು. ಆದರೆ ಒಂದು ಪ್ರಾಣಿಗೂ ಮತೊಂದು ಪ್ರಾಣಿಗೂ ಅದರ ವಿಕಾಸದಲ್ಲಿ ತಾರತಮ್ಯವಿರುತ್ತದೆ, ಅಷ್ಟೆ. ಈ ಆತ್ಮನನ್ನು ವಿಕಾಸಗೊಳಿಸಿಕೊಳ್ಳುವ ಯತ್ನ ಮಾಡು. ಆಗ ನೋಡುವೆ, ಬುದ್ಧಿಯು ಎಲ್ಲ ವಿಷಯಗಳಲ್ಲಿಯೂ ಪ್ರವೇಶಿಸುತ್ತದೆ. ಆತ್ಮವನ್ನರಿಯದವನ ಬುದ್ಧಿ ಏಕದರ್ಶಿನಿ. ಅವನು ಅಲ್ಪಸ್ವಲ್ಪವನ್ನು ತಿಳಿಯಬಲ್ಲ; ಆತ್ಮವನ್ನರಿತವನ ಬುದ್ಧಿಯು ಸರ್ವಗ್ರಾಸಿನಿ – ಎಲ್ಲವನ್ನೂ ವ್ಯಾಪಿಸಬಲ್ಲ. ಆತ್ಮ ಪ್ರಕಾಶವಾದರೆ, ದರ್ಶನ, ವಿಜ್ಞಾನ ಎಲ್ಲಾ ಆಧೀನವಾಗಿ ಬಿಡುವುದೆಂಬುದನ್ನು ನೋಡುವೆ. ಸಿಂಹಗರ್ಜನೆಯಂತೆ ಆತ್ಮದ ಮಹಿಮೆಯನ್ನು ಉದ್ಘೋಷಿಸು. ಜೀವಿಗಳಿಗೆ ಅಭಯವನ್ನು ಕೊಟ್ಟು ಹೀಗೆಂದು ಹೇಳು – **'ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ ನಿಬೋಧತ.'** *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೮, ಪು. ೧೧೭)*